ನ್ಯೂ ಇಂಡಿಯನ್ - ಎಕ್ಸ್. ಪ್ರೆಸ್ - 6-3-24

# Rejuvenated 'Appana Kere' to open tomorrow

**EXPRESS NEWS SERVICE**
@ Kalaburagi

The Sharanabasaveshwara Lake Management Authority is all set to inaugurate the rejuvenated project of Sharanabasaveshwara Lake nestled in the heart of Kalaburagi city, on Thursday, March 7. Spearheaded by the Regional Commissioner of Kalaburagi, Krishna Bajpai, who also chairs the Sharanabasaveshwara Lake Management Authority, the inauguration ceremony of the renovated works encompassing the Sharanabasaveshwara Lake popularly known as "Appana Kere" and Sharanabasaveshwara Lake Garden will be graced by Minister for Rural Development & Panchayat Raj Priyank Kharge, who is also district in-charge minister, on Thursday at 10am.

Once a cherished retreat for locals, the serene ambiance of the Sharanabasaveshwara Lake had waned due to various factors, including the impact of the CoVID-19 pandemic. In response, the Sharanabasaveshwara Lake Management Authority (SBLAM) has undertaken the task of restore the lake's natural charm. The aim is to transform it into a preferred recreational spot for citizens while actively contributing to biodiversity conservation.

The revitalised lake and its surroundings now boasts verdant landscapes and enhanced amenities including a food court, play zone and boating facilities. Additionally, the establishment of Brundavan Nursery provides environmental enthusiasts an opportunity to purchase plants and saplings. Drawing a diverse array of bird species, a newly constructed 'Bird Observation Tower' facilitates the observation of avian diversity, enriching the overall experience, said Bajpai.



Picture of Sharanabasaveshwara Lake Garden | EXPRESS

For the amusement of children, the "MUSKAAN" train offers joyous rides around the park, complementing the boating and leisurely strolls along the park's jetty. The lake's boating experience, featuring mechanized boats and pedal boats, provides an exceptional chance to explore the surroundings. A designated play area caters to children's recreational needs, while an open-air theatre equipped with a music system serves as a platform for cultural performances.

A dedicated space for yoga enthusiasts offers a tranquil area for yoga practice, while Nandini milk stall, cafes and snack bars ensure visitor satisfaction with quality refreshment.

Scanned with OKEN Scanner

ವಿಜಯ ವಾಣಿ - 6-3-24

### ಸಚಿವ ಪ್ರಿಯಾಂಕ್ ಚಾಲನೆ ನಾಳೆ | ಮುಸ್ಕಾನ್ ಪುಟಾಣಿ ರೈಲು ಪ್ರಮುಖ ಆಕರ್ಷಣೆ

# ನಳನಳಿಸುತ್ತಿರುವ ಶರಣಬಸವೇಶ್ವರ ಕೆರೆ



ನವೀಕರಣಗೊಂಡು ಕಂಗೊಳಿಸುತ್ತಿರುವ ಕಲಬುರಗಿ ಶರಣಬಸವೇಶ್ವರ ಕೆರೆ.

■ ವಿಜಯವಾಣಿ ಸುದ್ದಿಜಾಲ ಕಲಬುರಗಿ

ಹೃದಯಭಾಗದ ಅಪ್ಪನ ಕೆರೆ ಆವರಣದಲ್ಲಿ ಕೈಗೊಂಡ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನಾ ಸಮಾರಂಭ ಗುರುವಾರ ಬೆಳಗ್ಗೆ 10ಕ್ಕೆ ನಡೆಯಲಿದೆ ಎಂದು ಶ್ರೀ ಶರಣ ಬಸವೇಶ್ವರ ಕೆರೆ ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರಾದ ಪ್ರಾದೇಶಿಕ ಆಯುಕ್ತ ಕೃಷ್ಣ ಬಾಜಪೇಯಿ ತಿಳಿಸಿದ್ದಾರೆ.

ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಉದ್ಘಾಟಿಸುವರು. ಕೆರೆ ಆವರಣಕ್ಕೆ ಆಗಮಿಸುವ ದೇಶ-ವಿದೇಶದ ಪಕ್ಷಿ ಸಂಕುಲಗಳ ಪೂರ್ಣ ಮಾಹಿತಿ ನೀಡುವ ಪಕ್ಷಿ ಶಾಸ್ತ್ರಜ್ಞ ಡಾ.ಶಂಕರಪ್ಪ ಹತ್ತಿ ಬರೆದ ಕನ್ನಡ-ಇಂಗ್ಲಿಷ್ ಅವೃತ್ತಿ ಪುಸ್ತಕ, ಕೆರೆಯ ವೆಬ್‌ಸೈಟ್ ಲೋಕಾರ್ಪಣೆಗೊಳ್ಳಲಿವೆ.

ಕೆಲ ವರ್ಷ ಹಿಂದೆ ಮನರಂಜನೆ ತಾಣವಾಗಿದ್ದ ಕೆರೆ ಆವರಣ ಕೋವಿಡ್ ಸಂದರ್ಭದಲ್ಲಿ ಪಾಳುಬಿದ್ದಿತ್ತು. ಆದರೆ ಪ್ರಸ್ತುತ ಜಿಲ್ಲಾ ಉಸ್ತುವಾರಿ ಸಚಿವರ ನಿರ್ದೇಶನದಡಿ ಕೆರೆ ಆವರಣವನ್ನು ಪ್ರವಾಸಿ ತಾಣವಾಗಿ ಪರಿಸರ ಸಂರಕ್ಷಣೆ ಭಾಗವಾಗಿ ಅಭಿವೃದ್ಧಿಪಡಿಸಿದ್ದರಿಂದ ನಳನಳಿಸುತ್ತಿದೆ.

ಹಸಿರು ನೆಲಹಾಸುಗಳಿಂದ ಸಿಂಗಾರಗೊಂಡ ಆವರಣ ಹಚ್ಚಹಸಿರಾಗಿ ಪ್ರವಾಸಿಗರನ್ನು ಕೈಬೀಸಿ ಕರೆಯುತ್ತಿದೆ. ಬೃಂದಾವನ ನರ್ಸರಿ ಅಭಿವೃದ್ಧಿಪಡಿಸಿ ಭೇಟಿ ನೀಡುವ ಪರಿಸರ ಪ್ರೇಮಿಗಳಿಗೆ ಗಿಡ, ಸಸ್ಯ ಖರೀದಿಗೆ ಅವಕಾಶ ಕಲ್ಪಿಸಲಾಗಿದೆ. ದೇಶ-ವಿದೇಶಗಳಿಂದ ಆಗಮಿಸುವ ಪಕ್ಷಿಗಳು ಕೆರೆಯ ನಡುಗಡ್ಡೆ ಮತ್ತು ದಂಡೆಯಲ್ಲಿ ಆಶ್ರಯ ಪಡೆದು ಸ್ವಚ್ಛಂದ ಜೀವನ-ವಿಹಾರ ಮಾಡುವ ಅಪೂರ್ವ ನೋಟ ಕಣ್ಮನ ಸೆಳೆಯುತ್ತದೆ. ಇಂತಹ ಅಪೂರ್ವ

> **ಕೆರೆಯಲ್ಲಿ ಯಾಂತ್ರಿಕ ದೋಣಿ ಮತ್ತು ಪೆಡಲ್ ಬೋಟಿಂಗ್ ಸಜ್ಜಾಗಿ ನಿಂತಿವೆ. ಕೆರೆ ಸುತ್ತ ವಿಹರಿಸಲು ದೋಣಿಗಳು ಪ್ರವಾಸಿಗರನ್ನು ಆಕರ್ಷಿಸುತ್ತಿವೆ. ಮಕ್ಕಳಿಗಾಗಿ ಒಳ ಕ್ರೀಡಾಂಗಣ ಆಟದ ಮಜಾ-ಮಸ್ತಿಗೆ ವ್ಯವಸ್ಥೆ ಮಾಡಲಾಗಿದೆ. ಮಕ್ಕಳು ಹಾಗೂ ಸಾಂಸ್ಕೃತಿಕ ತಂಡಗಳು ಪ್ರತಿಭಾ ಪ್ರದರ್ಶನಕ್ಕಾಗಿ ಬಯಲು ರಂಗಮಂದಿರ, ಮ್ಯೂಸಿಕ್ ಸಿಸ್ಟಂ ಸಹ ಕಲ್ಪಿಸಲಾಗಿದೆ.**
>
> **| ಕೃಷ್ಣ ಬಾಜಪೇಯಿ ಪ್ರಾದೇಶಿಕ ಆಯುಕ್ತ**

ವೈವಿಧ್ಯ ಪಕ್ಷಿಗಳನ್ನು ಕಣ್ತುಂಬಿಕೊಳ್ಳಲು ಪಕ್ಷಿ ವೀಕ್ಷಣಾ ಗೋಪುರ ಸಿದ್ಧಗೊಂಡಿದೆ. ಮಕ್ಕಳ ಮನರಂಜನೆಗಾಗಿ ಮುಸ್ಕಾನ್ ಪುಟಾಣಿ ರೈಲು ಇನ್ನೊಂದು ಪ್ರಮುಖ ಆಕರ್ಷಣೆ. ಉದ್ಯಾನ ಸುತ್ತ ಪರ್ಯಟನೆ ಮಾಡಿ ದೋಣಿ ವಿಹಾರದ ಜೆಟ್ಟಿವರೆಗೆ ಆಹ್ಲಾದಕರ ಪ್ರಯಾಣದ ಸವಿಯನ್ನುಣ್ಣಬಹುದು.

ಯೋಗಕ್ಕಾಗಿ ಪ್ರತ್ಯೇಕ ಜಾಗ ಕಾದಿರಿಸಲಾಗಿದೆ. ಪ್ರವಾಸಿಗರಿಗೆ ಉತ್ತಮ ಪಾನೀಯ ಹಾಗೂ ನಂದಿನಿ ಉತ್ಪನ್ನ ಪೂರೈಕೆಗಾಗಿ ನಂದಿನಿ ಸ್ಟಾಲ್, ಶುಚಿರುಚಿ ತಿಂಡಿ-ತಿನಸಿಗಾಗಿ ಕೆಫೆಟೇರಿಯಾ ಹಾಗೂ ಲಘು ಉಪಾಹಾರ ಗೃಹಗಳು ಸೇವೆಗೆ ಸಜ್ಜಾಗಿವೆ. ಕೆರೆ ಉದ್ಯಾನ, ಆವರಣವನ್ನು ಮನೋಲ್ಲಾಸ ನೀಡುವಂಥ ತಾಣವಾಗಿ ನವೀಕರಿಸಲಾಗಿದೆ. ವಿದ್ಯುತ್ ದೀಪಗಳಿಂದ ಇಡೀ ಕೆರೆ ಝಗಮಗಿಸುವಂತೆ ಸಿಂಗರಿಸಲಾಗಿದೆ. ಪೂರ್ಣ ಪ್ಲಾಸ್ಟಿಕ್‌ಮುಕ್ತ ಪ್ರದೇಶ, ಪ್ರಕೃತಿ ಸ್ನೇಹಿ ಕೆರೆಯಾಗಿ ಅಭಿವೃದ್ಧಿಪಡಿಸಲಾಗಿದೆ.

ಶರಣಬಸವೇಶ್ವರ ಕೆರೆ ಮರು ನವೀಕರಣದ ಮಹತ್ವಾಕಾಂಕ್ಷಿ ಯೋಜನೆಯಡಿ ಕರೆ ತನ್ನ ಗತವೈಭವ ಸಾರಲು ಸಜ್ಜಾಗಿದೆ. ಪ್ರಕೃತಿ ಸ್ನೇಹಿ ಕೆರೆ ಮರು ನವೀಕರಣ ಉದ್ಘಾಟನೆ ಕಾರ್ಯಕ್ರಮಕ್ಕೆ ಸಾರ್ವಜನಿಕರಿಗೆ ಮುಕ್ತ ಪ್ರವೇಶವಿದೆ ಎಂದು ಬಾಜಪೇಯಿ ತಿಳಿಸಿದ್ದಾರೆ.

Scanned with OKEN Scanner

ವಿಜಯ. ಕರ್ನಾಟಕ. -6-3-24

# ಅಪ್ಪನ ಕೆರೆ ನವೀಕರಣ ಕಾಮಗಾರಿಗಳ ಉದ್ಘಾಟನೆ ನಾಳೆ

**ಕಲಬುರಗಿ:** ಹೃದಯ ಭಾಗದಲ್ಲಿರುವ ಶ್ರೀ ಶರಣಬಸವೇಶ್ವರ ಕೆರೆ ನಿರ್ವಹಣಾ ಪ್ರಾಧಿಕಾರದ 'ಅಪ್ಪನ ಕೆರೆ' ಎಂದೇ ಪ್ರಸಿದ್ಧಿ ಹೊಂದಿರುವ ಶರಣಬಸವೇಶ್ವರ ಕೆರೆ ಆವರಣದಲ್ಲಿ ಕೈಗೊಂಡ ಪುನರ್ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನಾ ಸಮಾರಂಭ ಮಾ.7ರಂದು ಬೆಳಗ್ಗೆ 10ಕ್ಕೆ ಜರುಗಲಿದೆ ಎಂದು ಶ್ರೀ ಶರಣಬಸವೇಶ್ವರ ಕೆರೆ ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರು ಹಾಗೂ ಆರ್‌ಸಿ ಕೃಷ್ಣ ಬಾಜಪೇಯಿ ತಿಳಿಸಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ಐಟಿಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಶರಣಬಸವೇಶ್ವರ ಕೆರೆ ಪುನರ್ ನವೀಕರಣ ಕಾಮಗಾರಿ ಉದ್ಘಾಟಿಸುವರು. ಕೆರೆ ಆವರಣಕ್ಕೆ



ಆಗಮಿಸುವ ಪಕ್ಷಿ ಸಂಕುಲಗಳ ಪೂರ್ಣ ಮಾಹಿತಿ ನೀಡುವ ಪಕ್ಷಿ ಶಾಸ್ತ್ರಜ್ಞ, ನಿಸರ್ಗ ತಜ್ಞ ಡಾ.ಶಂಕರಪ್ಪ ಹತ್ತಿ ಬರೆದ ಕನ್ನಡ-ಇಂಗ್ಲಿಷ್ ಆವೃತ್ತಿಯ ಪುಸ್ತಕದ ಲೋಕಾರ್ಪಣೆ ನಡೆಯಲಿದೆ. ಶರಣಬಸವೇಶ್ವರ ಕೆರೆಯ ವೆಬ್‌ಸೈಟ್‌ನ್ನು ಸಹ ಲೋಕಾರ್ಪಣೆ ಮಾಡಲಾಗುತ್ತದೆ. ಜಿಲ್ಲೆಯ ಶಾಸಕರು, ವಿಧಾನ ಪರಿಷತ್ ಸದಸ್ಯರು ಉಪಸ್ಥಿತರಿರುವರು.

Scanned with OKEN Scanner

ಕಲಬುರಗಿ. [illegible] - 6-3-24

# ನಾಳೆಜಿಲ್ಲಾ ಉಸ್ತುವಾರಿ ಸಚಿವರಿಂದ ಶರಣಬಸವೇಶ್ವರ ಕೆರೆ ಪುನರ್ ನವೀಕರಣ ಕಾಮಗಾರಿಗಳ ಉದ್ಘಾಟನೆ

ಕಲಬುರಗಿ,ಮಾ.5.–ಕಲಬುರಗಿ ಹೃದಯ ಭಾಗದಲ್ಲಿರುವ ಶ್ರೀ ಶರಣಬಸವೇಶ್ವರ ಕೆರೆ ನಿರ್ವಹಣಾ ಪ್ರಾಧಿಕಾರದ "ಅಪ್ಪನ ಕೆರೆ" ಎಂದೇ ಪ್ರಸಿದ್ಧಿ ಹೊಂದಿರುವ ಶರಣಬಸವೇಶ್ವರ ಕೆರೆ ಆವರಣದಲ್ಲಿ ಕೈಗೊಂಡ ಪುನರ್ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನಾ ಸಮಾರಂಭವು ಇದೇ ಮಾರ್ಚ್ 7 ರಂದು ಬೆಳಿಗ್ಗೆ 10 ಗಂಟೆಗೆ ಜರುಗಲಿದೆ ಎಂದು ಕಲಬುರಗಿ ಶ್ರೀ ಶರಣಬಸವೇಶ್ವರ ಕೆರೆ ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರು ಹಾಗೂ ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರಾದ ಕೃಷ್ಣ ಬಾಜಪೇಯಿ ಅವರು ತಿಳಿಸಿದ್ದಾರೆ.

ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ಐ.ಟಿ.ಬಿ.ಟಿ. ಸಚಿವರಾದ ಪ್ರಿಯಾಂಕ್ ಖರ್ಗೆ ಅವರು ಶರಣಬಸವೇಶ್ವರ ಕೆರೆ ಪುನರ್ ನವೀಕರಣ ಕಾಮಗಾರಿಗಳನ್ನು ಉದ್ಘಾಟಿಸುವರು.

ಇದೇ ಸಂದರ್ಭದಲ್ಲಿ ಕೆರೆ ಆವರಣಕ್ಕೆ ಆಗಮಿಸುವ ದೇಶ ವಿದೇಶದ ಅತಿಥಿ ಪಕ್ಷಿ ಸಂಕುಲಗಳ ಪೂರ್ಣ ಮಾಹಿತಿ ನೀಡುವ ಪಕ್ಷಿ ಶಾಸ್ತ್ರಜ್ಞ, ನಿಸರ್ಗ ತಜ್ಞ ಡಾ.ಶಂಕರಪ್ಪ ಹತ್ತಿ ಅವರು ಬರೆದ ಕನ್ನಡ–ಇಂಗ್ಲೀಷ್ ಅವೃತ್ತಿಯ ಪುಸ್ತಕದ ಲೋಕಾರ್ಪಣೆ ಕಾರ್ಯಕ್ರಮ ನಡೆಯಲಿದೆ. ಜೊತೆಗೆ ಶರಣಬಸವೇಶ್ವರ ಕೆರೆಯ ವೆಬ್‌ಸೈಟ್‌ನ್ನು ಸಹ ಲೋಕಾರ್ಪಣೆ ಮಾಡಲಾಗುತ್ತದೆ. ಈ ಸಂದರ್ಭದಲ್ಲಿ ಜಿಲ್ಲೆಯ ಶಾಸಕರು, ವಿಧಾನ ಪರಿಷತ್ ಸದಸ್ಯರು ಹಾಗೂ ಗಣ್ಯರ ಉಪಸ್ಥಿತರಿರುವರು.

ಹಸಿರು ಉದ್ಯಾನವಲಯದಡಿ ಅಭಿವೃದ್ಧಿಪಡಿಸಿದ ಪರಿಸರ ಪ್ರಿಯ ಕೆರೆ ಆವರಣದಲ್ಲಿ ಕೆಲವು ವರ್ಷಗಳ ಹಿಂದೆ ಮನರಂಜನೆಯ ಮನೋಹರ ತಾಣವಾಗಿದ್ದ ಕೆರೆಯ ಆವರಣವು ಕೋವಿಡ್ ಸಂದರ್ಭದಲ್ಲಿ ಪಾಳುಬಿದ್ದು ಶಿಥಿಲಾವಸ್ಥೆಗೆ ಬಂದಿತ್ತು. ಆದರೆ ಪ್ರಸ್ತುತ ಶ್ರೀ ಶರಣಬಸವೇಶ್ವರ ಕೆರೆ ನಿರ್ವಹಣಾ ಪ್ರಾಧಿಕಾರಕ್ಕೆ ಜಿಲ್ಲಾ ಉಸ್ತುವಾರಿ ಸಚಿವರ ನಿರ್ದೇಶನದಡಿ ಕೆರೆ ಆವರಣವನ್ನು ಪ್ರವಾಸಿ ತಾಣವಾಗಿ ಪರಿಸರ ಸಂರಕ್ಷಣೆಯ ಭಾಗವಾಗಿ ಅಭಿವೃದ್ಧಿಪಡಿಸಿದ್ದು, ಈಗ ನಳನಳಿಸುವ ಉದ್ಯಾನವನ್ನಾಗಿ ತಲೆ ಎತ್ತಿ ನಿಂತಿದೆ.

ಹಸಿರು ನೆಲಹಾಸುಗಳಿಂದ ಶೃಂಗಾರಗೊಂಡ ಆವರಣ ಹಚ್ಚುಹಸುರಾಗಿ ಪ್ರವಾಸಿಗರನ್ನು ಕೈಬಿಸಿ ಕರೆಯುತ್ತಿದೆ. ಇಲ್ಲಿ ಬೃಂದಾವನ ನರ್ಸರಿ ಅಭಿವೃದ್ಧಿಪಡಿಸಲಾಗಿದ್ದು, ಭೇಟಿನೀಡಿದ ಪರಿಸರ ಪ್ರೇಮಿಗಳಿಗೆ ಗಿಡ, ಸಸ್ಯಗಳ ಖರೀದಿಗೆ ಅವಕಾಶ ಕಲ್ಪಿಸಲಾಗಿದೆ. ದೇಶ ವಿದೇಶಗಳಿಂದ ಕೆರೆ ಆವರಣಕ್ಕೆ ಆಗಮಿಸುವ ವಿನೂತನ ವರ್ಗಗಳ ಪಕ್ಷಿಗಳು ಕೆರೆಯ ನಡುಗಡ್ಡೆ ಮತ್ತು ದಂಡೆಯಲ್ಲಿ ಆಶ್ರಯ ಪಡೆದು ಸ್ವಚ್ಛಂದ ಜೀವನ–ವಿಹಾರ ಮಾಡುವ ಅಪೂರ್ವ ನೋಟ ಕಣ್ಮನ ಸೆಳೆಯುತ್ತದೆ. ಇಂತಹ ಅಪೂರ್ವ ವೈವಿಧ್ಯ ಪಕ್ಷಿಗಳನ್ನು ನೋಡಿ ಕಣ್ತುಂಬಿಕೊಳ್ಳಲು 'ಪಕ್ಷಿ ವೀಕ್ಷಣಾ ಗೋಪುರ'ವು ಸಿದ್ಧಗೊಂಡಿದೆ. ಮಕ್ಕಳ ಮನರಂಜನೆಗಾಗಿ 'ಮುಸ್ಕಾನ್ ಪುಟಾಣಿ ರೈಲು' ಇನ್ನೊಂದು ಪ್ರಮುಖ ಆಕರ್ಷಣೆಯಾಗಿದ್ದು, ಉದ್ಯಾನ ಸುತ್ತ ಪರ್ಯಟನೆ ಮಾಡಿ ದೋಣಿ ವಿಹಾರದ ಜೆಟ್ಟಿವರೆಗೆ ಅಹ್ಲಾದಕರ ಪ್ರಯಾಣದ ಸವಿಯನ್ನುಣ್ಣುವ ಅವಕಾಶವಿದೆ.

ಕೆರೆಯಲ್ಲಿ ದೋಣಿ ವಿಹಾರದ ಅಪೂರ್ವ ಅನುಭವ ಸವಿಯಲು ಯಾಂತ್ರಿಕ ದೋಣಿಗಳು ಮತ್ತು ಪೆಡೆಲ್ ಬೋಟಿಂಗ್ ಸಜ್ಜಾಗಿ ನಿಂತಿವೆ. ಕೆರೆಯ ಸುತ್ತ ವಿಹಾರ ಮಾಡಲು ದೋಣಿಗಳು ಪ್ರವಾಸಿಗರನ್ನು ಆಕರ್ಷಿಸುತ್ತಿದೆ. ಮಕ್ಕಳಿಗಾಗಿ ಒಳ ಕ್ರಿಡಾಂಗಣ ಆಟದ ಮಜಾಮಸ್ತಿ ವ್ಯವಸ್ಥೆ ಸಿದ್ಧಗೊಂಡಿದೆ. ಮಕ್ಕಳು ಹಾಗೂ ಸಾಂಸ್ಕೃತಿಕ ತಂಡಗಳು ತಮ್ಮ ಪ್ರತಿಭಾ ಪ್ರದರ್ಶನಕ್ಕಾಗಿ ಬಯಲು ರಂಗಮಂದಿರ ಹಾಗೂ ಮ್ಯೂಸಿಕ್ ಸಿಸ್ಟಂ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ಯೋಗಪಟುಗಳಿಗಾಗಿ ಯೋಗ ಮಾಡಲು ಪ್ರತ್ಯೇಕ ಜಾಗ ಕಾಯ್ದಿರಿಸಲಾಗಿದೆ. ಪ್ರವಾಸಿಗರಿಗೆ ಉತ್ತಮ ಪಾನಿಯ ಹಾಗೂ ನಂದಿನಿ ಉತ್ಪನ್ನ ಪೂರೈಕೆಗಾಗಿ ನಂದಿನಿ ಸ್ಟಾಲ್, ಶುಚಿರುಚಿ ತಿಂಡಿ ತಿನಸು ಲಭ್ಯವಾಗಲು ಕೆಫೆಟೇರಿಯಾ ಹಾಗೂ ಲಘು ಉಪಹಾರ ಗೃಹಗಳು ಸೇವೆಗೆ ಸಿದ್ಧಗೊಂಡಿದೆ. ಕೆರೆಯ ಉದ್ಯಾನ, ಆವರಣ ಮನೋಲ್ಲಾಸ ನೀಡುವ ಪ್ರಕೃತಿ ರಮಣಿಯತೆ ಸವಿಯುವ ಸುಂದರ ತಾಣವಾಗಿ ಪುನರ್ ನವೀಕರಿಸಲಾಗಿದೆ. ವಿದ್ಯುದ್ದೀಪಗಳಿಂದ ಇಡೀ ಕೆರೆ ಆವರಣ ಝುಗಮಗಿಸುವಂತೆ ಶೃಂಗರಿಸಲಾಗಿದೆ. ಪೂರ್ಣ ಪ್ಲಾಸ್ಟಿಕ್ ಮುಕ್ತ ಪ್ರದೇಶವಾಗಿ ಪ್ರಕೃತಿ ಸ್ನೇಹಿ ಕೆರೆಯಾಗಿ ಈಗ ಅಭಿವೃದ್ಧಿ ಪಡಿಸಲಾಗಿದೆ.

ಇಡೀ ಶರಣಬಸವೇಶ್ವರ ಕೆರೆ ಪುನರ್ ನವೀಕರಣದ ಮಹತ್ವಾಕಾಂಕ್ಷಿ ಯೋಜನೆಯು ನಗರ ಮಧ್ಯೆ ಇರುವ ಪ್ರಕೃತಿ ರಮಣೀಯ ತಾಣ ಮತ್ತೆ ಗತವೈಭವವನ್ನು ಸಾರಲು ಸಜ್ಜಾಗಿದೆ. ಪ್ರಕೃತಿ ಸ್ನೇಹಿ ಶರಣಬಸವೇಶ್ವರ ಕೆರೆ ಪುನರ ನವೀಕರಣ ಉದ್ಘಾಟನೆ ಕಾರ್ಯಕ್ರಮಕ್ಕೆ ಸಾರ್ವಜನಿಕರಿಗೆ ಮುಕ್ತ ಪ್ರವೇಶವಿದೆ. ಸಾರ್ವಜನಿಕರು ಈ ಕಾರ್ಯಕ್ರಮಕ್ಕೆ ಬಂದು ಪರಿಸರ ಪ್ರೀತಿಯ ಕೆರೆ ಅಭಿವೃದ್ಧಿ ಯೊಜನೆಯ ಕಾರ್ಯಕ್ರಮಕ್ಕೆ ಸಾಕ್ಷಿಯಾಗಬೇಕೆಂದು ಅವರು ತಿಳಿಸಿದ್ದಾರೆ.

Scanned with OKEN Scanner

6-3-24

# ನಾಳೆಜಿಲ್ಲಾ ಉಸ್ತುವಾರಿ ಸಚಿವರಿಂದ ಶರಣಬಸವೇಶ್ವರ ಕೆರೆ ಪುನರ್ ನವೀಕರಣ ಕಾಮಗಾರಿಗಳ ಉದ್ಘಾಟನೆ

ಕಲಬುರಗಿ,ಮಾ.5.-ಕಲಬುರಗಿ ಹೃದಯ ಭಾಗದಲ್ಲಿರುವ ಶ್ರೀ ಶರಣಬಸವೇಶ್ವರ ಕೆರೆನಿರ್ವಹಣಾ ಪ್ರಾಧಿಕಾರದ "ಅಪ್ಪನ ಕೆರೆ" ಎಂದೇ ಪ್ರಸಿದ್ಧಿ ಹೊಂದಿರುವ ಶರಣಬಸವೇಶ್ವರ ಕೆರೆ ಆವರಣದಲ್ಲಿ ಕೈಗೊಂಡ ಪುನರ್ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನಾ ಸಮಾರಂಭವು ಇದೇ ಮಾರ್ಚ್ 7 ರಂದು ಬೆಳಿಗ್ಗೆ 10 ಗಂಟೆಗೆ ಜರುಗಲಿದೆ ಎಂದು ಕಲಬುರಗಿ ಶ್ರೀ ಶರಣಬಸವೇಶ್ವರ ಕೆರೆ ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರು ಹಾಗೂ ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರಾದ ಕೃಷ್ಣ ಬಾಜಪೇಯಿ ಅವರು ತಿಳಿಸಿದ್ದಾರೆ.

ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ಐ.ಟಿ.ಬಿ.ಟಿ. ಸಚಿವರಾದ ಪ್ರಿಯಾಂಕ್ ಖರ್ಗೆ ಅವರು ಶರಣಬಸವೇಶ್ವರ ಕೆರೆ ಪುನರ್ ನವೀಕರಣ ಕಾಮಗಾರಿಗಳನ್ನು ಉದ್ಘಾಟಿಸುವರು.

ಇದೇ ಸಂದರ್ಭದಲ್ಲಿ ಕೆರೆ ಆವರಣಕ್ಕೆ ಆಗಮಿಸುವ ದೇಶ ವಿದೇಶದ ಅತಿಥಿ ಪಕ್ಷಿ ಸಂಕುಲಗಳ ಪೂರ್ಣ ಮಾಹಿತಿ ನೀಡುವ ಪಕ್ಷಿ ಶಾಸ್ತ್ರಜ್ಞ, ನಿಸರ್ಗ ತಜ್ಞ ಡಾ.ಶಂಕರಪ್ಪ ಹತ್ತಿ ಅವರು ಬರೆದ ಕನ್ನಡ-ಇಂಗ್ಲೀಷ್ ಅವೃತ್ತಿಯ ಪುಸ್ತಕದ ಲೋಕಾರ್ಪಣೆ ಕಾರ್ಯಕ್ರಮ ನಡೆಯಲಿದೆ. ಜೊತೆಗೆ ಶರಣಬಸವೇಶ್ವರ ಕೆರೆಯ ವೆಬ್‌ಸೈಟ್‌ನ್ನು ಸಹ ಲೋಕಾರ್ಪಣೆ ಮಾಡಲಾಗುತ್ತದೆ. ಈ ಸಂದರ್ಭದಲ್ಲಿ ಜಿಲ್ಲೆಯ ಶಾಸಕರು, ವಿಧಾನ ಪರಿಷತ್ ಸದಸ್ಯರು ಹಾಗೂ ಗಣ್ಯರ ಉಪಸ್ಥಿತರಿರುವರು.

ಹಸಿರು ಉದ್ಯಾನವಲಯದಡಿ ಅಭಿವೃದ್ಧಿಪಡಿಸಿದ ಪರಿಸರ ಪ್ರಿಯ ಕೆರೆ ಆವರಣದಲ್ಲಿ ಕೆಲವು ವರ್ಷಗಳ ಹಿಂದೆ ಮನರಂಜನೆಯ ಮನೋಹರ ತಾಣವಾಗಿದ್ದ ಕೆ-ರೆಯ ಆವರಣವು ಕೋವಿಡ್ ಸಂದರ್ಭದಲ್ಲಿ ಪಾಳುಬಿದ್ದು ಶಿಥಿಲಾವಸ್ಥೆಗೆ ಬಂದಿತ್ತು. ಆದರೆ ಪ್ರಸ್ತುತ ಶ್ರೀ ಶರಣಬಸವೇಶ್ವರ ಕೆರೆ ನಿರ್ವಹಣಾ ಪ್ರಾಧಿಕಾರಕ್ಕೆ ಜಿಲ್ಲಾ ಉಸ್ತುವಾರಿ ಸಚಿವರ ನಿರ್ದೇಶನದಡಿ ಕೆರೆ ಆವರಣವನ್ನು ಪ್ರವಾಸಿ ತಾಣವಾಗಿ ಪರಿಸರ ಸಂರಕ್ಷಣೆಯ ಭಾಗವಾಗಿ ಅಭಿವೃದ್ಧಿಪಡಿಸಿದ್ದು, ಈಗ ನಳನಳಿಸುವ ಉದ್ಯಾನವನ್ನಾಗಿ ತಲೆ ಎತ್ತಿ ನಿಂತಿದೆ.

ಹಸಿರು ನೆಲಹಾಸುಗಳಿಂದ ಶೃಂಗಾರಗೊಂಡ ಆವರಣ ಹಚ್ಚುಹಸುರಾಗಿ ಪ್ರವಾಸಿಗರನ್ನು ಕೈಬೀಸಿ ಕರೆಯುತ್ತಿದೆ. ಇಲ್ಲಿ ಬೃಂದಾವನ ನರ್ಸರಿ ಅಭಿವೃದ್ಧಿಪಡಿಸಲಾಗಿದ್ದು, ಭೇಟಿ ನೀಡಿದ ಪರಿಸರ ಪ್ರೇಮಿಗಳಿಗೆ ಗಿಡ, ಸಸ್ಯಗಳ ಖರೀದಿಗೆ ಅವಕಾಶ ಕಲ್ಪಿಸಲಾಗಿದೆ. ದೇಶ ವಿದೇಶಗಳಿಂದ ಕೆರೆ ಆವರಣಕ್ಕೆ ಆಗಮಿಸುವ ವಿನೂತನ ವರ್ಗಗಳ ಪಕ್ಷಿಗಳು ಕೆರೆಯ ನಡುಗಡ್ಡೆ ಮತ್ತು ದಂಡೆಯಲ್ಲಿ ಆಶ್ರಯ ಪಡೆದು ಸ್ವಚ್ಛಂದ ಜೀವನ-ವಿಹಾರ ಮಾಡುವ ಅಪೂರ್ವ ನೋಟ ಕಣ್ಮನ ಸೆಳೆಯುತ್ತದೆ. ಇಂತಹ ಅಪೂರ್ವ ವೈವಿಧ್ಯ ಪಕ್ಷಿಗಳನ್ನು ನೋಡಿ ಕಣ್ತುಂಬಿಕೊಳ್ಳಲು 'ಪಕ್ಷಿ ವೀಕ್ಷಣಾ ಗೋಪುರ'ವು ಸಿದ್ಧಗೊಂಡಿದೆ. ಮಕ್ಕಳ ಮನರಂಜನೆಗಾಗಿ 'ಮುಸ್ಕಾನ್ ಪುಟಾಣಿ ರೈಲು' ಇನ್ನೊಂದು ಪ್ರಮುಖ ಆಕರ್ಷಣೆಯಾಗಿದ್ದು, ಉದ್ಯಾನ ಸುತ್ತ ಪರ್ಯಟನೆ ಮಾಡಿ ದೋಣಿ ವಿಹಾರದ ಜೆಟ್ಟಿವರೆಗೆ ಆಹ್ಲಾದಕರ ಪ್ರಯಾಣದ ಸವಿಯನ್ನುಣ್ಣುವ ಅವಕಾಶವಿದೆ.

ಕೆರೆಯಲ್ಲಿ ದೋಣಿ ವಿಹಾರದ ಅಪೂರ್ವ ಅನುಭವ ಸವಿಯಲು ಯಾಂತ್ರಿಕ ದೋಣಿಗಳು ಮತ್ತು ಪೆಡೆಲ್ ಬೋಟಿಂಗ್ ಸಜ್ಜಾಗಿ ನಿಂತಿವೆ. ಕೆರೆಯ ಸುತ್ತ ವಿಹಾರ ಮಾಡಲು ದೋಣಿಗಳು ಪ್ರವಾಸಿಗರನ್ನು ಆಕರ್ಷಿಸುತ್ತಿದೆ. ಮಕ್ಕಳಿಗಾಗಿ ಒಳ ಕ್ರಿಡಾಂಗಣ ಆಟದ ಮಜಾಮಸ್ತಿ ವ್ಯವಸ್ಥೆ ಸಿದ್ಧಗೊಂಡಿದೆ. ಮಕ್ಕಳು ಹಾಗೂ ಸಾಂಸ್ಕೃತಿಕ ತಂಡಗಳು ತಮ್ಮ ಪ್ರತಿಭಾ ಪ್ರದರ್ಶನಕ್ಕಾಗಿ ಬಯಲು ರಂಗಮಂದಿರ ಹಾಗೂ ಮ್ಯೂಸಿಕ್ ಸಿಸ್ಟಂ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ಯೋಗಪಟುಗಳಿಗಾಗಿ ಯೋಗ ಮಾಡಲು ಪ್ರತ್ಯೇಕ ಜಾಗ ಕಾಯ್ದಿರಿಸಲಾಗಿದೆ. ಪ್ರವಾಸಿಗರಿಗೆ ಉತ್ತಮ ಪಾನೀಯ ಹಾಗೂ ನಂದಿನಿ ಉತ್ಪನ್ನ ಪೂರೈಕೆಗಾಗಿ ನಂದಿನಿ ಸ್ಟಾಲ್, ರುಚಿರುಚಿ ತಿಂಡಿ ತಿನಸು ಲಭ್ಯವಾಗಲು ಕೆಫೆಟೇರಿಯಾ ಹಾಗೂ ಲಘು ಉಪಹಾರ ಗೃಹಗಳು ಸೇವೆಗೆ ಸಿದ್ಧಗೊಂಡಿದೆ. ಕೆರೆಯ ಉದ್ಯಾನ, ಆವರಣ ಮನೋಲ್ಲಾಸ ನೀಡುವ ಪ್ರಕೃತಿ ರಮಣೀಯತೆ ಸವಿಯುವ ಸುಂದರ ತಾಣವಾಗಿ ಪುನರ್ ನವೀಕರಿಸಲಾಗಿದೆ. ವಿದ್ಯುದ್ದೀಪಗಳಿಂದ ಇಡೀ ಕೆರೆ ಆವರಣ ಝಗಮಗಿಸುವಂತೆ ಶೃಂಗರಿಸಲಾಗಿದೆ. ಪೂರ್ಣ ಪ್ಲಾಸ್ಟಿಕ್ ಮುಕ್ತ ಪ್ರದೇಶವಾಗಿ ಪ್ರಕೃತಿ ಸ್ನೇಹಿ ಕೆರೆಯಾಗಿ ಈಗ ಅಭಿವೃದ್ಧಿ ಪಡಿಸಲಾಗಿದೆ.

ಇಡೀ ಶರಣಬಸವೇಶ್ವರ ಕೆರೆ ಪುನರ್ ನವೀಕರಣದ ಮಹತ್ವಾಕಾಂಕ್ಷಿಯೋಜನೆಯು ನಗರ ಮಧ್ಯೆ ಇರುವ ಪ್ರಕೃತಿ ರಮಣೀಯ ತಾಣ ಮತ್ತೆ ಗತವೈಭವವನ್ನು ಸಾರಲು ಸಜ್ಜಾಗಿದೆ. ಪ್ರಕೃತಿ ಸ್ನೇಹಿ ಶರಣಬಸವೇಶ್ವರ ಕೆರೆ ಪುನರ ನವೀಕರಣ ಉದ್ಘಾಟನೆ ಕಾರ್ಯಕ್ರಮಕ್ಕೆ ಸಾರ್ವಜನಿಕರಿಗೆ ಮುಕ್ತ ಪ್ರವೇಶವಿದೆ. ಸಾರ್ವಜನಿಕರು ಈ ಕಾರ್ಯಕ್ರಮಕ್ಕೆ ಬಂದು ಪರಿಸರ ಪ್ರೀತಿಯ ಕೆರೆ ಅಭಿವೃದ್ಧಿ ಯೋಜನೆಯ ಕಾರ್ಯಕ್ರಮಕ್ಕೆ ಸಾಕ್ಷಿಯಾಗಬೇಕೆಂದು ಅವರು ತಿಳಿಸಿದ್ದಾರೆ.

3 – 1

Scanned with OKEN Scanner

[illegible]
6/3/2024

# ಜಿಲ್ಲಾ ಉಸ್ತುವಾರಿ ಸಚಿವರಿಂದ ಶರಣಬಸವೇಶ್ವರ ಕೆರೆ ಪುನರ್ ನವೀಕರಣ ಕಾಮಗಾರಿಗಳ ಉದ್ಘಾಟನೆ

ಕಲಬುರಗಿ,ಮಾ.5: ಕಲಬುರಗಿ ಹೃದಯ ಭಾಗದಲ್ಲಿರುವ ಶ್ರೀ ಶರಣಬಸವೇಶ್ವರ ಕೆರೆ ನಿರ್ವಹಣಾ ಪ್ರಾಧಿಕಾರದ "ಅಪ್ಪನ ಕೆರೆ" ಎಂದೇ ಪ್ರಸಿದ್ಧಿ ಹೊಂದಿರುವ ಶರಣಬಸವೇಶ್ವರ ಕೆರೆ ಆವರಣದಲ್ಲಿ ಕೈಗೊಂಡ ಪುನರ್ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನಾ ಸಮಾರಂಭವು ಇದೇ ಮಾರ್ಚ್ 7 ರಂದು ಬೆಳಿಗ್ಗೆ 10 ಗಂಟೆಗೆ ಜರುಗಲಿದೆ ಎಂದು ಕಲಬುರಗಿ ಶ್ರೀ ಶರಣಬಸವೇಶ್ವರ ಕೆರೆ ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರು ಹಾಗೂ ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರಾದ ಕೃಷ್ಣ ಬಾಜಪೇಯಿ ಅವರು ತಿಳಿಸಿದ್ದಾರೆ.

ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ಐ.ಟಿ.ಬಿ.ಟಿ. ಸಚಿವರಾದ ಪ್ರಿಯಾಂಕ್ ಖರ್ಗೆ ಅವರು ಶರಣಬಸವೇಶ್ವರ ಕೆರೆ ಪುನರ್ ನವೀ ಕರಣ ಕಾಮಗಾರಿಗಳನ್ನು ಉದ್ಘಾಟಿಸುವರು.

ಇದೇ ಸಂದರ್ಭದಲ್ಲಿ ಕೆರೆ ಆವರಣಕ್ಕೆ ಆಗಮಿಸುವ ದೇಶ ವಿದೇಶದ ಅತಿಥಿ ಪಕ್ಷಿ ಸಂಕುಲಗಳ ಪೂರ್ಣ ಮಾಹಿತಿ ನೀಡುವ ಪಕ್ಷಿ ಶಾಸ್ತ್ರಜ್ಞ, ನಿಸರ್ಗ ತಜ್ಞ ಡಾ.ಶಂಕರಪ್ಪ ಹತ್ತಿ ಅವರು ಬರೆದ ಕನ್ನಡ-ಇಂಗ್ಲೀಷ್ ಅವೃತ್ತಿಯ ಪುಸ್ತಕದ ಲೋಕಾರ್ಪಣೆ ಕಾರ್ಯಕ್ರಮ ನಡೆಯಲಿದೆ. ಜೊತೆಗೆ ಶರಣಬಸವೇಶ್ವರ ಕೆರೆಯ ವೆಬ್‌ಸೈಟ್‌ನ್ನು ಸಹ ಲೋಕಾರ್ಪಣೆ ಮಾಡಲಾಗುತ್ತದೆ. ಈ ಸಂದರ್ಭದಲ್ಲಿ ಜಿಲ್ಲೆಯ ಶಾಸಕರು, ವಿಧಾನ ಪರಿಷತ್ ಸದಸ್ಯರು ಹಾಗೂ ಗಣ್ಯರ ಉಪಸ್ಥಿತರಿರುವರು.

ಹಸಿರು ಉದ್ಯಾನವಲಯದಡಿ ಅಭಿವೃದ್ಧಿಪಡಿಸಿದ ಪರಿಸರ ಪ್ರಿಯ ಕೆರೆ ಆವರಣದಲ್ಲಿ ಕೆಲವು ವರ್ಷಗಳ ಹಿಂದೆ ಮನರಂಜನೆಯ ಮನೋಹರ ತಾಣವಾಗಿದ್ದ ಕೆರೆಯ ಆವರಣವು ಕೋವಿಡ್ ಸಂದರ್ಭದಲ್ಲಿ ಪಾಳುಬಿದ್ದು ಶಿಥಿಲಾವಸ್ಥೆಗೆ ಬಂದಿತ್ತು. ಆದರೆ ಪ್ರಸ್ತುತ ಶ್ರೀ ಶರಣಬಸವೇಶ್ವರ ಕೆರೆ ನಿರ್ವಹಣಾ ಪ್ರಾಧಿಕಾರಕ್ಕೆ ಜಿಲ್ಲಾ ಉಸ್ತುವಾರಿ ಸಚಿವರ ನಿರ್ದೇಶನದಡಿ ಕೆರೆ ಆವರಣವನ್ನು ಪ್ರವಾಸಿ ತಾಣವಾಗಿ ಪರಿಸರ ಸಂರಕ್ಷಣೆಯ ಭಾಗವಾಗಿ ಅಭಿವೃದ್ಧಿಪಡಿಸಿದ್ದು, ಈಗ ನಳನಳಿಸುವ ಉದ್ಯಾನವನ್ನಾಗಿ ತಲೆ ಎತ್ತಿ ನಿಂತಿದೆ.

ಹಸಿರು ನೆಲಹಾಸುಗಳಿಂದ ಶೃಂಗಾರಗೊಂಡ ಆವರಣ ಹಚ್ಚುಹಸುರಾಗಿ ಪ್ರವಾಸಿಗರನ್ನು ಕೈಬಿಸಿ ಕರೆಯುತ್ತಿದೆ. ಇಲ್ಲಿ ಬೃಂದಾವನ ನರ್ಸರಿ ಅಭಿವೃದ್ಧಿಪಡಿಸಲಾಗಿದ್ದು, ಭೇಟಿ ನೀಡಿದ ಪರಿಸರ ಪ್ರೇಮಿಗಳಿಗೆ ಗಿಡ, ಸಸ್ಯಗಳ ಖರೀದಿಗೆ ಅವಕಾಶ ಕಲ್ಪಿಸಲಾಗಿದೆ. ದೇಶ ವಿದೇಶಗಳಿಂದ ಕೆರೆ ಆವರಣಕ್ಕೆ ಆಗಮಿಸುವ ವಿನೂತನ ವರ್ಗಗಳ ಪಕ್ಷಿಗಳು ಕೆರೆಯ ನಡುಗಡ್ಡೆ ಮತ್ತು ದಂಡೆಯಲ್ಲಿ ಆಶ್ರಯ ಪಡೆದು ಸ್ವಚ್ಛಂದ ಜೀವನ-ವಿಹಾರ ಮಾಡುವ ಅಪೂರ್ವ ನೋಟ ಕಣ್ಮನ ಸೆಳೆಯುತ್ತದೆ. ಇಂತಹ ಅಪೂರ್ವ ವೈವಿಧ್ಯ ಪಕ್ಷಿಗಳನ್ನು ನೋಡಿ ಕಣ್ತುಂಬಿಕೊಳ್ಳಲು 'ಪಕ್ಷಿ ವೀಕ್ಷಣಾ ಗೋಪುರ'ವು ಸಿದ್ಧಗೊಂಡಿದೆ. ಮಕ್ಕಳ ಮನರಂಜನೆಗಾಗಿ 'ಮುಸ್ಕಾನ್ ಪುಟಾಣಿ ರೈಲು' ಇನ್ನೊಂದು ಪ್ರಮುಖ ಆಕರ್ಷಣೆಯಾಗಿದ್ದು, ಉದ್ಯಾನ ಸುತ್ತ ಪರ್ಯಟನೆ ಮಾಡಿ ದೋಣಿ ವಿಹಾರದ ಜೆಟ್ಟಿವರೆಗೆ ಅಹ್ಲಾದಕರ ಪ್ರಯಾಣದ ಸವಿಯನ್ನುಣ್ಣುವ ಅವಕಾಶವಿದೆ.

ಕೆರೆಯಲ್ಲಿ ದೋಣಿ ವಿಹಾರದ ಅಪೂರ್ವ ಅನುಭವ ಸವಿಯಲು ಯಾಂತ್ರಿಕ ದೋಣಿಗಳು ಮತ್ತು ಪೆಡೆಲ್ ಬೋಟಿಂಗ್ ಸಜ್ಜಾಗಿ ನಿಂತಿವೆ. ಕೆರೆಯ ಸುತ್ತ ವಿಹಾರ ಮಾಡಲು ದೋಣಿಗಳು ಪ್ರವಾಸಿಗರನ್ನು ಆಕರ್ಷಿಸುತ್ತಿದೆ. ಮಕ್ಕಳಿಗಾಗಿ ಒಳ ಕ್ರಿಡಾಂಗಣ ಆಟದ ಮಜಾಮಸ್ತಿ ವ್ಯವಸ್ಥೆ ಸಿದ್ಧ ಗೊಂಡಿದೆ. ಮಕ್ಕಳು ಹಾಗೂ ಸಾಂಸ್ಕೃತಿಕ ತಂಡಗಳು ತಮ್ಮ ಪ್ರತಿಭಾ ಪ್ರದರ್ಶನಕ್ಕಾಗಿ ಬಯಲು ರಂಗಮಂದಿರ ಹಾಗೂ ಮ್ಯೂಸಿಕ್ ಸಿಸ್ಟಂ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ಯೋಗಪಟುಗಳಿಗಾಗಿ ಯೋಗ ಮಾಡಲು ಪ್ರತ್ಯೇಕ ಜಾಗ ಕಾಯ್ದಿರಿಸಲಾಗಿದೆ. ಪ್ರವಾಸಿಗರಿಗೆ ಉತ್ತಮ ಪಾನಿಯ ಹಾಗೂ ನಂದಿನಿ ಉತ್ಪನ್ನ ಪೂರೈಕೆಗಾಗಿ ನಂದಿನಿ ಸ್ಟಾಲ್, ಶುಚಿರುಚಿ ತಿಂಡಿ ತಿನಸು ಲಭ್ಯವಾಗಲು ಕೆಫೆಟೇರಿಯಾ ಹಾಗೂ ಲಘು ಉಪಹಾರ ಗೃಹಗಳು ಸೇವೆಗೆ ಸಿದ್ಧಗೊಂಡಿದೆ. ಕೆರೆಯ ಉದ್ಯಾನ, ಆವರಣ ಮನೋಲ್ಲಾಸ ನೀಡುವ ಪ್ರಕೃತಿ ರಮಣಿಯತೆ ಸವಿಯುವ ಸುಂದರ ತಾಣವಾಗಿ ಪುನರ್ ನವೀಕರಿಸಲಾಗಿದೆ. ವಿದ್ಯುದ್ದೀಪಗಳಿಂದ ಇಡೀ ಕೆರೆ ಆವರಣ ಝುಗಮಗಿಸುವಂತೆ [illegible]ಗರಿಸಲಾಗಿದೆ. ಪೂರ್ಣ ಪ್ಲಾಸ್ಟಿಕ್ ಮುಕ್ತ ಪ್ರದೇಶವಾಗಿ ಪ್ರಕೃತಿ ಸ್ನೇಹಿ ಕೆರೆಯಾಗಿ ಈಗ [illegible] ಪಡಿಸಲಾಗಿದೆ.

ಇಡೀ ಶರಣಬಸವೇಶ್ವರ ಕೆರೆ ಪುನರ್ ನವೀಕರಣದ ಮಹತ್ವಾಕಾಂಕ್ಷಿ ಯೋಜನೆಯು ನಗರ ಮಧ್ಯೆ ಇರುವ ಪ್ರಕೃತಿ ರಮಣೀಯ ತಾಣ ಮತ್ತೆ ಗತವೈಭವವನ್ನು ಸಾರಲು ಸಜ್ಜಾಗಿದೆ. ಪ್ರಕೃತಿ ಸ್ನೇಹಿ ಶರಣಬಸವೇಶ್ವರ ಕೆರೆ ಪುನರ ನವೀಕರಣ ಉದ್ಘಾಟನೆ ಕಾರ್ಯಕ್ರಮಕ್ಕೆ ಸಾರ್ವಜನಿಕರಿಗೆ ಮುಕ್ತ ಪ್ರವೇಶವಿದೆ.

ಸಾರ್ವಜನಿಕರು ಈ ಕಾರ್ಯಕ್ರಮಕ್ಕೆ ಬಂದು ಪರಿಸರ ಪ್ರೀತಿಯ ಕೆರೆ ಅಭಿವೃದ್ಧಿ ಯೋಜನೆಯ ಕಾರ್ಯ ಕ್ರಮಕ್ಕೆ ಸಾಕ್ಷಿಯಾಗಬೇಕೆಂದು ಅವರು ತಿಳಿಸಿದ್ದಾರೆ.

Scanned with OKEN Scanner

6/3/2024

# ಮಾರ್ಚ್ 7 ರಂದು ಜಿಲ್ಲಾ ಉಸ್ತುವಾರಿ ಸಚಿವರಿಂದ ಶರಣಬಸವೇಶ್ವರ ಕೆರೆ ಪುನರ್ ನವೀಕರಣ ಕಾಮಗಾರಿಗಳ ಉದ್ಘಾಟನೆ

ಕಲಬುರಗಿ,ಮಾ.5.(ಕ.ವಾ)– ಕಲಬುರಗಿ ಹೃದಯ ಭಾಗದಲ್ಲಿರುವ ಶ್ರೀ ಶರಣಬಸವೇಶ್ವರ ಕೆರೆ ನಿರ್ವಹಣಾ ಪ್ರಾಧಿಕಾರದ "ಅಪ್ಪನ ಕೆರೆ" ಎಂದೇ ಪ್ರಸಿದ್ಧಿ ಹೊಂದಿರುವ ಶರಣಬಸವೇಶ್ವರ ಕೆರೆ ಆವರಣದಲ್ಲಿ ಕೈಗೊಂಡ ಪುನರ್ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನಾ ಸಮಾರಂಭವು ಇದೇ ಮಾರ್ಚ್ 7 ರಂದು ಬೆಳಿಗ್ಗೆ 10 ಗಂಟೆಗೆ ಜರುಗಲಿದೆ ಎಂದು ಕಲಬುರಗಿ ಶ್ರೀ ಶರಣಬಸವೇಶ್ವರ ಕೆರೆ ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರು ಹಾಗೂ ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರಾದ ಕೃಷ್ಣ ಬಾಜಪೇಯಿ ಅವರು ತಿಳಿಸಿದ್ದಾರೆ.

ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ಐ.ಟಿ.ಬಿ.ಟಿ. ಸಚಿವರಾದ ಪ್ರಿಯಾಂಕ್ ಖರ್ಗೆ ಅವರು ಶರಣಬಸವೇಶ್ವರ ಕೆರೆ ಪುನರ್ ನವೀಕರಣ ಕಾಮಗಾರಿಗಳನ್ನು ಉದ್ಘಾಟಿಸುವರು.

ಇದೇ ಸಂದರ್ಭದಲ್ಲಿ ಕೆರೆ ಆವರಣಕ್ಕೆ ಆಗಮಿಸುವ ದೇಶ ವಿದೇಶದ ಅತಿಥಿ ಪಕ್ಷಿ ಸಂಕುಲಗಳ ಪೂರ್ಣ ಮಾಹಿತಿ ನೀಡುವ ಪಕ್ಷಿ ಶಾಸ್ತ್ರಜ್ಞ, ನಿಸರ್ಗ ತಜ್ಞ ಡಾ.ಶಂಕರಪ್ಪ ಹತ್ತಿ ಅವರು ಬರೆದ ಕನ್ನಡ–ಇಂಗ್ಲೀಷ್ ಅವೃತ್ತಿಯ ಪುಸ್ತಕದ ಲೋಕಾರ್ಪಣೆ ಕಾರ್ಯಕ್ರಮ ನಡೆಯಲಿದೆ. ಜೊತೆಗೆ ಶರಣಬಸವೇಶ್ವರ ಕೆರೆಯ ವೆಬ್‌ಸೈಟ್‌ನ್ನು ಸಹ ಲೋಕಾರ್ಪಣೆ ಮಾಡಲಾಗುತ್ತದೆ. ಈ ಸಂದರ್ಭದಲ್ಲಿ ಜಿಲ್ಲೆಯ ಶಾಸಕರು, ವಿಧಾನ ಪರಿಷತ್ ಸದಸ್ಯರು ಹಾಗೂ ಗಣ್ಯರ ಉಪಸ್ಥಿತರಿರುವರು.

ಹಸಿರು ಉದ್ಯಾನವಲಯದಡಿ ಅಭಿವೃದ್ಧಿಪಡಿಸಿದ ಪರಿಸರ ಪ್ರಿಯ ಕೆರೆ ಆವರಣದಲ್ಲಿ ಕೆಲವು ವರ್ಷಗಳ ಹಿಂದೆ ಮನರಂಜನೆಯ ಮನೋಹರ ತಾಣವಾಗಿದ್ದ ಕೆರೆಯ ಆವರಣವು ಕೋವಿಡ್ ಸಂದರ್ಭದಲ್ಲಿ ಹಾಳುಬಿದ್ದು ಶಿಥಿಲಾವಸ್ಥೆಗೆ ಬಂದಿತ್ತು. ಆದರೆ ಪ್ರಸ್ತುತ ಶ್ರೀ ಶರಣಬಸವೇಶ್ವರ ಕೆರೆ ನಿರ್ವಹಣಾ ಪ್ರಾಧಿಕಾರಕ್ಕೆ ಜಿಲ್ಲಾ ಉಸ್ತುವಾರಿ ಸಚಿವರ ನಿರ್ದೇಶನದಡಿ- ಕೆರೆ ಆವರಣವನ್ನು ಪ್ರವಾಸಿ ತಾಣವಾಗಿ ಪರಿಸರ ಸಂರಕ್ಷಣೆಯ ಭಾಗವಾಗಿ ಅಭಿವೃದ್ಧಿಪಡಿಸಿದ್ದು, ಈಗ ನಳನಳಿಸುವ ಉದ್ಯಾನವನ್ನಾಗಿ ತಲೆ ಎತ್ತಿ ನಿಂತಿದೆ.

ಹಸಿರು ನೆಲಹಾಸುಗಳಿಂದ ಶೃಂಗಾರಗೊಂಡ ಆವರಣ ಹಚ್ಚುಹಸುರಾಗಿ ಪ್ರವಾಸಿಗರನ್ನು ಕೈಬಿಸಿ ಕರೆಯುತ್ತಿದೆ. ಇಲ್ಲಿ ಬೃಂದಾವನ ನರ್ಸರಿ ಅಭಿವೃದ್ಧಿಪಡಿಸಲಾಗಿದ್ದು, ಭೇಟಿ ನೀಡಿದ ಪರಿಸರ ಪ್ರೇಮಿಗಳಿಗೆ ಗಿಡ, ಸಸ್ಯಗಳ ಖರೀದಿಗೆ ಅವಕಾಶ ಕಲ್ಪಿಸಲಾಗಿದೆ. ದೇಶ ವಿದೇಶಗಳಿಂದ ಕೆರೆ ಆವರಣಕ್ಕೆ ಆಗಮಿಸುವ ವಿನೂತನ ವರ್ಗಗಳ ಪಕ್ಷಿಗಳು ಕೆರೆಯ ನಡುಗಡ್ಡೆ ಮತ್ತು ದಂಡೆಯಲ್ಲಿ

ಆಶ್ರಯ ಪಡೆದು ಸ್ವಚ್ಛಂದ ಜೀವನ-ವಿಹಾರ ಮಾಡುವ ಅಪೂರ್ವ ನೋಟ ಕಣ್ಮನ ಸೆಳೆಯುತ್ತದೆ. ಇಂತಹ ಅಪೂರ್ವ ವೈವಿಧ್ಯ ಪಕ್ಷಿಗಳನ್ನು ನೋಡಿ ಕಣ್ತುಂಬಿಕೊಳ್ಳಲು 'ಪಕ್ಷಿ ವೀಕ್ಷಣಾ ಗೋಪುರ'ವು ಸಿದ್ಧಗೊಂಡಿದೆ. ಮಕ್ಕಳ ಮನರಂಜನೆಗಾಗಿ 'ಮುಸ್ಕಾನ್ ಪುಟಾಣಿ ರೈಲು'ಇನ್ನೊಂದು ಪ್ರಮುಖ ಆಕರ್ಷಣೆಯಾಗಿದ್ದು,

ಉದ್ಯಾನ ಸುತ್ತ ಪರ್ಯಟನೆ ಮಾಡಿ ದೋಣಿ ವಿಹಾರದ ಜೆಟ್ಟಿವರೆಗೆ ಅಹ್ಲಾದಕರ ಪ್ರಯಾಣದ ಸವಿಯನ್ನುಣ್ಣುವ ಅವಕಾಶವಿದೆ.

ಕೆರೆಯಲ್ಲಿ ದೋಣಿ ವಿಹಾರದ ಅಪೂರ್ವ ಅನುಭವ ಸವಿಯಲು ಯಾಂತ್ರಿಕ ದೋಣಿಗಳು ಮತ್ತು ಪೆಡೆಲ್ ಬೋಟಿಂಗ್ ಸಜ್ಜಾಗಿ ನಿಂತಿವೆ. ಕೆರೆಯ ಸುತ್ತ ವಿಹಾರ ಮಾಡಲು ದೋಣಿಗಳು ಪ್ರವಾಸಿಗರನ್ನು ಆಕರ್ಷಿಸುತ್ತಿದೆ. ಮಕ್ಕಳಿಗಾಗಿ ಒಳ ಕ್ರೀಡಾಂಗಣ ಆಟದ ಮಜಾಮಸ್ತಿ ವ್ಯವಸ್ಥೆ ಸಿದ್ಧಗೊಂಡಿದೆ. ಮಕ್ಕಳು ಹಾಗೂ ಸಾಂಸ್ಕೃತಿಕ ತಂಡಗಳು ತಮ್ಮ ಪ್ರತಿಭಾ ಪ್ರದರ್ಶನಕ್ಕಾಗಿ ಬಯಲು ರಂಗಮಂದಿರ ಹಾಗೂ ಮ್ಯೂಸಿಕ್ ಸಿಸ್ಟಂ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ಯೋಗಪಟುಗಳಿಗಾಗಿ ಯೋಗ ಮಾಡಲು ಪ್ರತ್ಯೇಕ ಜಾಗ ಕಾಯ್ದಿರಿಸಲಾಗಿದೆ. ಪ್ರವಾಸಿಗರಿಗೆ ಉತ್ತಮ ಪಾನಿಯ ಹಾಗೂ ನಂದಿನಿ ಉತ್ಪನ್ನ ಪೂರೈಕೆಗಾಗಿ ನಂದಿನಿ ಸ್ಟಾಲ್, ರುಚಿರುಚಿ ತಿಂಡಿ ತಿನಸು ಲಭ್ಯವಾಗಲು ಕೆಫೆಟೇರಿಯಾ ಹಾಗೂ ಲಘು ಉಪಹಾರ ಗೃಹಗಳು ಸೇವೆಗೆ ಸಿದ್ಧಗೊಂಡಿದೆ. ಕೆರೆಯ ಉದ್ಯಾನ, ಆವರಣ ಮನೋಲ್ಲಾಸ ನೀಡುವ ಪ್ರಕೃತಿ ರಮಣಿಯತೆ ಸವಿಯುವ ಸುಂದರ ತಾಣವಾಗಿ ಪುನರ್ ನವೀಕರಿಸಲಾಗಿದೆ. ವಿದ್ಯುದ್ದೀಪಗಳಿಂದ ಇಡೀ ಕೆರೆ ಆವರಣ ಝುಗಮಗಿಸುವಂತೆ ಶೃಂಗರಿಸಲಾಗಿದೆ. ಪೂರ್ಣ ಪ್ಲಾಸ್ಟಿಕ್ ಮುಕ್ತ ಪ್ರದೇಶವಾಗಿ ಪ್ರಕೃತಿ ಸ್ನೇಹಿ ಕೆರೆಯಾಗಿ ಈಗ ಅಭಿವೃದ್ಧಿ ಪಡಿಸಲಾಗಿದೆ.

ಇಡೀ ಶರಣಬಸವೇಶ್ವರ ಕೆರೆ ಪುನರ್ ನವೀಕರಣದ ಮಹತ್ವಾಕಾಂಕ್ಷಿ ಯೋಜನೆಯು ನಗರ ಮಧ್ಯೆ ಇರುವ ಪ್ರಕೃತಿ ರಮಣೀಯ ತಾಣ ಮತ್ತೆ ಗತವೈಭವವನ್ನು ಸಾರಲು ಸಜ್ಜಾಗಿದೆ. ಪ್ರಕೃತಿ ಸ್ನೇಹಿ ಶರಣಬಸವೇಶ್ವರ ಕೆರೆ ಪುನರ ನವೀಕರಣ ಉದ್ಘಾಟನೆ ಕಾರ್ಯಕ್ರಮಕ್ಕೆ ಸಾರ್ವಜನಿಕರಿಗೆ ಮುಕ್ತ ಪ್ರವೇಶವಿದೆ. ಸಾರ್ವಜನಿಕರು ಈ ಕಾರ್ಯಕ್ರಮಕ್ಕೆ ಬಂದು ಪರಿಸರ ಪ್ರೀತಿಯ ಕೆರೆ ಅಭಿವೃದ್ಧಿ ಯೊಜನೆಯ ಕಾರ್ಯಕ್ರಮಕ್ಕೆ ಸಾಕ್ಷಿಯಾಗಬೇಕೆಂದು ಅವರು ತಿಳಿಸಿದ್ದಾರೆ.

Scanned with OKEN Scanner

ಸುದ್ದಿ ಪ್ರಪಂಚ
6/3/2024

# ಮಾರ್ಚ್ 7ರಂದು ಜಿಲ್ಲಾ ಉಸ್ತುವಾರಿ ಸಚಿವರಿಂದ ಶರಣಬಸವೇಶ್ವರ ಕೆರೆ ಪುನರ್ ನವೀಕರಣ ಕಾಮಗಾರಿಗಳ ಉದ್ಘಾಟನೆ

ಕಲಬುರಗಿ:ಕಲಬುರಗಿ ಹೃದಯ ಭಾಗದಲ್ಲಿರುವ ಶ್ರೀ ಶರಣಬಸವೇಶ್ವರ ಕೆರೆ ನಿರ್ವಹಣಾ ಪ್ರಾಧಿಕಾರದ "ಅಪ್ಪನ ಕೆರೆ" ಎಂದೇ ಪ್ರಸಿದ್ಧಿ ಹೊಂದಿರುವ ಶರಣಬಸವೇಶ್ವರ ಕೆರೆ ಆವರಣದಲ್ಲಿ ಕೈಗೊಂಡ ಪುನರ್ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನಾ ಸಮಾರಂಭವು ಇದೇ ಮಾರ್ಚ್ 7ರಂದು ಬೆಳಿಗ್ಗೆ 10 ಗಂಟೆಗೆ ಜರುಗಲಿದೆ ಎಂದು ಕಲಬುರಗಿ ಶ್ರೀ ಶರಣಬಸವೇಶ್ವರ ಕೆರೆ ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರು ಹಾಗೂ ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರಾದ ಕೃಷ್ಣ ಬಾಜಪೇಯಿ ಅವರು ತಿಳಿಸಿದ್ದಾರೆ.

ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ಐ.ಟಿ.ಬಿ.ಟಿ. ಸಚಿವರಾದ ಪ್ರಿಯಾಂಕ್ ಖರ್ಗೆ ಅವರು ಶರಣಬಸವೇಶ್ವರ ಕೆರೆ ಪುನರ್ ನವೀಕರಣ ಕಾಮಗಾರಿಗಳನ್ನು ಉದ್ಘಾಟಿಸುವರು.

ಇದೇ ಸಂದರ್ಭದಲ್ಲಿ ಕೆರೆ ಆವರಣಕ್ಕೆ ಆಗಮಿಸುವ ದೇಶ ವಿದೇಶದ ಅತಿಥಿ ಪಕ್ಷಿ ಸಂಕುಲಗಳ ಪೂರ್ಣ ಮಾಹಿತಿ ನೀಡುವ ಪಕ್ಷಿ ಶಾಸ್ತ್ರಜ್ಞ, ನಿಸರ್ಗ ತಜ್ಞ ಡಾ.ಶಂಕರಪ್ಪ ಹತ್ತಿ ಅವರು ಬರೆದ ಕನ್ನಡ–ಇಂಗ್ಲೀಷ್ ಅವೃತ್ತಿಯ ಪುಸ್ತಕದ ಲೋಕಾರ್ಪಣೆ ಕಾರ್ಯಕ್ರಮ ನಡೆಯಲಿದೆ. ಜೊತೆಗೆ ಶರಣಬಸವೇಶ್ವರ ಕೆರೆಯ ವೆಬ್‌ಸೈಟ್‌ನ್ನು ಸಹ ಲೋಕಾರ್ಪಣೆ ಮಾಡಲಾಗುತ್ತದೆ. ಈ ಸಂದರ್ಭದಲ್ಲಿ ಜಿಲ್ಲೆಯ ಶಾಸಕರು, ವಿಧಾನ ಪರಿಷತ್ ಸದಸ್ಯರು ಹಾಗೂ ಗಣ್ಯರು ಉಪಸ್ಥಿತರಿರುವರು.

ಹಸಿರು ಉದ್ಯಾನವಲಯದಡಿ ಅಭಿವೃದ್ಧಿಪಡಿಸಿದ ಪರಿಸರ ಪ್ರಿಯ ಕೆರೆ ಆವರಣದಲ್ಲಿ ಕೆಲವು ವರ್ಷಗಳ ಹಿಂದೆ ಮನರಂಜನೆಯ ಮನೋಹರ ತಾಣವಾಗಿದ್ದ ಕೆರೆಯ ಆವರಣ ಶ್ರೀ ಶರಣಬಸವೇಶ್ವರ ಕೆರೆ ನಿರ್ವಹಣಾ ಪ್ರಾಧಿಕಾರಕ್ಕೆ ಜಿಲ್ಲಾ ಉಸ್ತುವಾರಿ ಸಚಿವರ ನಿರ್ದೇಶನದಡಿ ಕೆರೆ ಆವರಣವನ್ನು ಪ್ರವಾಸಿ ತಾಣವಾಗಿ ಪರಿಸರ ಸಂರಕ್ಷಣೆಯ ಭಾಗವಾಗಿ ಅಭಿವೃದ್ಧಿಪಡಿಸಿದ್ದು, ಈಗ ನಳನಳಿಸುವ ಉದ್ಯಾನವನವಾಗಿ ತಲೆ ಎತ್ತಿ ನಿಂತಿದೆ.

ಹಸಿರು ನೆಲಹಾಸುಗಳಿಂದ ಶೃಂಗಾರಗೊಂಡ ಆವರಣ ಹಚ್ಚುಹಸುರಾಗಿ-ಪ್ರವಾಸಿಗರನ್ನು ಕೈಬೀಸಿ ಕರೆಯುತ್ತಿದೆ. ಇಲ್ಲಿ ಬೃಂದಾವನ ನರ್ಸರಿ ಅಭಿವೃದ್ಧಿಪಡಿಸಲಾಗಿದ್ದು, ಭೇಟಿ ನೀಡಿದ ಪರಿಸರ ಪ್ರೇಮಿಗಳಿಗೆ ಗಿಡ, ಸಸ್ಯಗಳ ಖರೀದಿಗೆ ಅವಕಾಶ ಕಲ್ಪಿಸಲಾಗಿದೆ. ದೇಶ ವಿದೇಶಗಳಿಂದ ಕೆರೆ ಆವರಣಕ್ಕೆ ಆಗಮಿಸುವ ವಿನೂತನ ವರ್ಗಗಳ ಪಕ್ಷಿಗಳು ಕೆರೆಯ ನಡುಗಡ್ಡೆ ಮತ್ತು ದಂಡೆಯಲ್ಲಿ ಆಶ್ರಯ ಪಡೆದು ಸ್ವಚ್ಛಂದ ಜೀವನ–ವಿಹಾರ ಮಾಡುವ ಅಪೂರ್ವ ನೋಟ ಕಣ್ಮನ ಸೆಳೆಯುತ್ತದೆ. ಇಂತಹ ಅಪೂರ್ವ ವೈವಿಧ್ಯ ಪಕ್ಷಿಗಳನ್ನು ನೋಡಿ ಕಣ್ತುಂಬಿಕೊಳ್ಳಲು 'ಪಕ್ಷಿ ವೀಕ್ಷಣಾ ಗೋಪುರ'ವು ಸಿದ್ಧಗೊಂಡಿದೆ. ಮಕ್ಕಳ ಮನರಂಜನೆಗಾಗಿ 'ಮುಸ್ಕಾನ್ ಪುಟಾಣಿ ರೈಲು' ಇನ್ನೊಂದು ಪ್ರಮುಖ ಆಕರ್ಷಣೆಯಾಗಿದ್ದು, ಉದ್ಯಾನ ಸುತ್ತ ಪರ್ಯಟನೆ ಮಾಡಿ ಮೋಜಿನ ವಿಹಾರದ ಜೊತೆಗೆ ಆಹ್ಲಾದಕರ ಪ್ರಯಾಣದ ಸವಿಯನ್ನುಣ್ಣುವ ಅವಕಾಶವಿದೆ. ಕೆರೆಯಲ್ಲಿ ದೋಣಿ ವಿಹಾರದ ಅಪೂರ್ವ ಅನುಭವ ಸವಿಯಲು ಯಾಂತ್ರಿಕ ದೋಣಿಗಳು ಮತ್ತು ಪೆಡೆಲ್ ಬೋಟಿಂಗ್ ಸಜ್ಜಾಗಿ ನಿಂತಿವೆ. ಕೆರೆಯ ಸುತ್ತ ವಿಹಾರ ಮಾಡಲು ದೋಣಿಗಳು ಪ್ರವಾಸಿಗರನ್ನು ಆಕರ್ಷಿಸುತ್ತಿದೆ. ಮಕ್ಕಳಿಗಾಗಿ ಒಳ ಕ್ರೀಡಾಂಗಣ ಆಟದ ಮಜಾಮಸ್ತಿ ವ್ಯವಸ್ಥೆ ಸಿದ್ಧಗೊಂಡಿದೆ. ಮಕ್ಕಳು ಹಾಗೂ ಸಾಂಸ್ಕೃತಿಕ ತಂಡಗಳು ತಮ್ಮ ಪ್ರತಿಭಾ ಪ್ರದರ್ಶನಕ್ಕಾಗಿ ಬಯಲು ರಂಗಮಂದಿರ ಹಾಗೂ ಮ್ಯೂಸಿಕ್ ಸಿಸ್ಟಂ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ಯೋಗಪಟುಗಳಿಗಾಗಿ ಯೋಗ ಮಾಡಲು ಪ್ರತ್ಯೇಕ ಜಾಗ ಕಾಯ್ದಿರಿಸಲಾಗಿದೆ. ಪ್ರವಾಸಿಗರಿಗೆ ಉತ್ತಮ ಪಾನಿಯ ಹಾಗೂ ನಂದಿನಿ ಉತ್ಪನ್ನ ಪೂರೈಕೆಗಾಗಿ ನಂದಿನಿ ಸ್ಟಾಲ್, ಶುಚಿರುಚಿ ತಿಂಡಿ ತಿನಸು ಲಭ್ಯವಾಗಲು ಕೆಫೆಟೇರಿಯಾ ಹಾಗೂ ಲಘು ಉಪಹಾರ ಗೃಹಗಳು ಸೇವೆಗೆ ಸಿದ್ಧಗೊಂಡಿವೆ. ಕೆರೆಯ ಉದ್ಯಾನ, ಆವರಣ ಮನೋಲ್ಲಾಸ ನೀಡುವ ಪ್ರಕೃತಿ ರಮಣೀಯತೆ ಸವಿಯುವ ಸುಂದರ ತಾಣವಾಗಿ ಪುನರ್ ನವೀಕರಿಸಲಾಗಿದೆ. ವಿದ್ಯುದ್ದೀಪಗಳಿಂದ ಇಡೀ ಕೆರೆ ಆವರಣ ಝಗಮಗಿಸುವಂತೆ ಶೃಂಗರಿಸಲಾಗಿದೆ. ಪೂರ್ಣ ಪ್ಲಾಸ್ಟಿಕ್ ಮುಕ್ತ ಪ್ರದೇಶವಾಗಿ ಪ್ರಕೃತಿ ಸ್ನೇಹಿ ಕೆರೆಯಾಗಿ ಈಗ ಅಭಿವೃದ್ಧಿಪಡಿಸಲಾಗಿದೆ.

ಇಡೀ ಶರಣಬಸವೇಶ್ವರ ಕೆರೆ ಪುನರ್ ನವೀಕರಣದ ಮಹತ್ವಾಕಾಂಕ್ಷಿ ಯೋಜನೆಯು ನಗರ ಮಧ್ಯೆ ಇರುವ ಪ್ರಕೃತಿ ರಮಣೀಯ ತಾಣ ಮತ್ತೆ ಗತವೈಭವವನ್ನು ಸಾರಲು ಸಜ್ಜಾಗಿದೆ. ಪ್ರಕೃತಿ ಸ್ನೇಹಿ ಶರಣಬಸವೇಶ್ವರ ಕೆರೆ ಪುನರ ನವೀಕರಣ ಉದ್ಘಾಟನೆ ಕಾರ್ಯಕ್ರಮಕ್ಕೆ ಸಾರ್ವಜನಿಕರಿಗೆ ಮುಕ್ತ ಪ್ರವೇಶವಿದೆ. ಸಾರ್ವಜನಿಕರು ಈ ಕಾರ್ಯಕ್ರಮಕ್ಕೆ ಬಂದು ಪರಿಸರ ಪ್ರೀತಿಯ ಕೆರೆ ಅಭಿವೃದ್ಧಿ ಯೋಜನೆಯ ಕಾರ್ಯಕ್ರಮಕ್ಕೆ ಸಾಕ್ಷಿಯಾಗಬೇಕೆಂದು ಅವರು ತಿಳಿಸಿದ್ದಾರೆ.

Scanned with OKEN Scanner